# ಬೆಳಕು ಉಳಿಸಿಹೋದ ದೀಪ



■ ಪ್ರವೀಣ ಕುಲಕರ್ಣಿ

'ಬದುಕನ್ನು ಹೇಗೆ ಸಾರ್ಥಕ ಮಾಡಿಕೊಳ್ಳಬೇಕು' ಎಂಬ ಪ್ರಶ್ನೆಗೆ ಉತ್ತರ ಎನ್ನುವಂತೆ ಬಾಳಿ ತೋರಿಸಿದ 'ಅಜ್ಜಿ' ಇವರು. ಅಳಿದ ಮೇಲೂ ಜನಮಾನಸದಲ್ಲಿ ಉಳಿದವರು. ಹೆಸರು ಸಬಿಹಾ ಹಷ್ಮಿ. ಉತ್ತರಪ್ರದೇಶದ ಅಲಿಗಢ ಮೂಲದ ಈ ಅಜ್ಜಿ ಕಳೆದವಾರವಷ್ಟೇ ಬೆಂಗಳೂರು ಪಕ್ಕದ ಜ್ಯೋತಿಪಾಳ್ಯ ಎಂಬ ಪುಟ್ಟ ಊರಿನಲ್ಲಿ ಕೊನೆಯುಸಿರು ಎಳೆದರು. ಆದರೆ, ತಮ್ಮ ನಿರ್ಗಮನದ ಮುನ್ನ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ, ಅವರನ್ನು ಸ್ವಾವಲಂಬಿಯಾಗಿ ಬೆಳೆಸುವ ಮೌನ ಕ್ರಾಂತಿಯನ್ನೂ ಮಾಡಿದವರು. ಹಾಗಾಗಿ ಆ ಕೆಲಸಗಳಲ್ಲಿ ಅಮರರಾಗಿ ಉಳಿದವರು.

ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಜ್ಯೋತಿಪಾಳ್ಯದ ಅವರ ಮನೆ ಊರಿನ ಎಲ್ಲರ ಪಾಲಿಗೆ, ಅದರಲ್ಲೂ ತಳಸಮುದಾಯಗಳ ಮಕ್ಕಳ ಪಾಲಿಗೆ 'ಅಜ್ಜಿ ಮನೆ'ಯೇ ಆಗಿತ್ತು. ಮಕ್ಕಳಿಗೆ 'ಅಜ್ಜಿ ಮನೆ'ಗೆ ಹೋಗುವುದೆಂದರೆ ಇನ್ನಿಲ್ಲದ ಖುಷಿ. ಹಾಗೆ ಮನೆಗೆ ಬಂದವರು ನೆಮ್ಮದಿಯ ಬದುಕಿನ ಪಾಠಗಳನ್ನು ಕಲಿತುಕೊಂಡೇ ಹೋಗಬೇಕು ಎನ್ನುವುದು ಆ ಮನೆ ಹಾಕಿಕೊಂಡಿರುವ ನಿಯಮವಾಗಿತ್ತು. 'ನಲಿ ಕಲಿ'ಯ ಹೊಸ ಮಾದರಿಯೊಂದು ಇಲ್ಲಿ ಸೃಷ್ಟಿಯಾಗಿತ್ತು. ಸಬಿಹಾ ಅವರು ದೆಹಲಿಯಲ್ಲಿ ಲಲಿತಕಲಾ ಶಿಕ್ಷಣದಲ್ಲಿ ಪದವೀಧರರಾಗಿ ಕಲಾ ಶಿಕ್ಷಕಿಯಾಗಿ ನಿವೃತ್ತರಾಗಿದ್ದರು. ನಿವೃತ್ತಿಯ ನಂತರ ಉತ್ತರ ಭಾರತದಿಂದ ಬೆಂಗಳೂರಿಗೆ ನೆಲೆ ಬದಲಿಸಿದ್ದರು. ಬೆಂಗಳೂರಿನಲ್ಲಿ ಕೆಲಕಾಲ ಶಿಕ್ಷಕಿಯಾಗಿ ತಮ್ಮ ಅನುಭವವನ್ನು ಧಾರೆ ಎರೆದ ಅವರು, ಹಳ್ಳಿಯ ಮಕ್ಕಳಿಗಾಗಿ ಏನನ್ನಾದರೂ ಮಾಡಬೇಕು ಎಂಬ ಮಹದಾಸೆಯಿಂದ ಜ್ಯೋತಿಪಾಳ್ಯದತ್ತ ಹೆಜ್ಜೆ ಹಾಕಿದ್ದರು.

ತಮ್ಮ ಸಂಪಾದನೆಯಲ್ಲಿ ಉಳಿಸಿದ ದುಡ್ಡಿನಿಂದ ಜ್ಯೋತಿಪಾಳ್ಯದಲ್ಲಿ ಒಂದು ಪುಟ್ಟ ಜಮೀನು ಖರೀದಿಸಿದ ಅವರು, ಅಲ್ಲಿನ ಜನರಿಗೆ ಶಿಕ್ಷಣದ ಮಹತ್ವವನ್ನೂ ಸಾರಿದರು. ಹಸು ಮೇಯಿಸಲು ಬಂದವರ ಕೈಗೆ ಬಣ್ಣದ ಬ್ರಶ್ ಕೊಟ್ಟು ಚಿತ್ತಾರ ಬಿಡಿಸುವ ಕಲೆಯನ್ನು ಹೇಳಿಕೊಟ್ಟರು. ಓದಲು ಪುಸ್ತಕವನ್ನೂ ನೀಡಿದರು. ಕಥೆಗಳನ್ನು ಹೇಳುತ್ತಾ ಓದಿನ ರುಚಿ ಹಚ್ಚಿಸಿದರು. ಪಾಠ ಕಲಿಯಲು ಬಂದ ಮಕ್ಕಳ ಪಾಲಿಗೆಲ್ಲ 'ಅಜ್ಜಿ'ಯೇ ಆದರು. ಮುಂದೆ ಅಜ್ಜಿ ಕಲಿಕಾ ಕೇಂದ್ರವನ್ನು ಕಟ್ಟಿ ಬೆಳೆಸಿ, ಜ್ಯೋತಿಪಾಳ್ಯದ ನೈಜ ಜ್ಯೋತಿಯಾಗಿ ಬೆಳಗಿದರು. ಗ್ರಾಮೀಣ ಭಾಗದ ಹೆಣ್ಣು ಮಕ್ಕಳ ಬಾಳನ್ನೂ ಬೆಳಗಿಸಿದರು. ಶಿಕ್ಷಣದಲ್ಲಿ ಹೆಣ್ಣು ಮಕ್ಕಳಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ, ಅವರ ಕಲಿಕೆಗೂ ಸಮಾನ ಅವಕಾಶ ಸಿಗುವಂತೆ ಶ್ರಮಿಸಿದರು.

ಜ್ಯೋತಿಪಾಳ್ಯದಲ್ಲಿ ಅರ್ಧಕ್ಕೆ ಓದು ಮೊಟಕುಗೊಳಿಸಿ, ಎಳೆಯ ವಯಸ್ಸಿನಲ್ಲೇ ಸಂಸಾರದ ನೊಗ ಹೊರಲು ಸಿದ್ಧರಾಗುತ್ತಿದ್ದ ಹುಡುಗಿಯರು ಕಾಲೇಜಿನ ಮೆಟ್ಟಿಲು ಹತ್ತಿ, ತಮ್ಮಿಷ್ಟದ ಉದ್ಯೋಗ ಹಿಡಿದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವುದು ಸಾಧ್ಯವಾಗಿರುವುದು ಸಬಿಹಾ ಅವರ ಜಾದೂವಲ್ಲದೆ ಮತ್ತೇನು? ಹಲವು ಹುಡುಗಿಯರಿಗೆ ಪದವಿ ಕಾಲೇಜಿನ ಮೆಟ್ಟಿಲೇರಲು ನೆರವು ನೀಡಿದ ಈ ಅಜ್ಜಿ, ಆದಾಯದ ಮೂಲವನ್ನು ಕಂಡುಕೊಳ್ಳಲು ಇನ್ನು ಕೆಲವರಿಗೆ ಕಸೂತಿ ಕಲೆಯನ್ನು ಹೇಳಿಕೊಟ್ಟರು. ಅಲ್ಲಿ ಸಿದ್ಧವಾದ ವಸ್ತುಗಳಿಗೆ ಮಾರುಕಟ್ಟೆಯನ್ನೂ ಕಲ್ಪಿಸಿದರು. ಈ ಗ್ರಾಮದ ಹಲವು ಯುವತಿಯರು ಉದ್ಯೋಗ ಹಿಡಿಯಲು ಕಾರಣರಾಗಿ ಮನೆ ಮನೆಗಳಲ್ಲಿ ದೀಪ ಬೆಳಗುವಂತೆ ಮಾಡಿದರು. ಧರ್ಮದ ಅಫೀಮು ಯಾರ ತಲೆಯನ್ನೂ ಹೊಗದಂತೆ ಭಾವೈಕ್ಯದ ಬೀಜ ಬಿತ್ತಿದರು.

'ಜ್ಯೋತಿಪಾಳ್ಯಕ್ಕೆ ಬಂದ ಆರಂಭದಲ್ಲಿ ಇಲ್ಲಿನ ಅಸಹಾಯಕ ಹೆಣ್ಣುಮಕ್ಕಳ ಸ್ಥಿತಿಕಂಡು ಅನೇಕ ಮಕ್ಕಳ ಶಾಲಾ ಶುಲ್ಕ ಕಟ್ಟಿದೆವು. ವಿದ್ಯಾರ್ಥಿಗಳಿಗೆ ಕಲಿಕೆಗೆ ಬೇಕಾದ ಸಾಮಗ್ರಿಗಳನ್ನೂ ಕೊಡಿಸಿದೆವು. ಆದರೆ ಇಷ್ಟೇ ಸಾಲದು ಎನ್ನಿಸಿತು. ಹೀಗಾಗಿ ಹುಡುಗಿಯರಿಗೆ ಹೊಲಿಗೆ, ಕಸೂತಿ, ಕರಕುಶಲ ಕಲೆಯ ಪಾಠ ಆರಂಭಿಸಿದೆವು' ಎಂದು ಸಬಿಹಾ ಸಂದರ್ಶನವೊಂದರಲ್ಲಿ ನೆನಪಿಸಿಕೊಂಡಿದ್ದರು.

ಹಳೆಯ ಬಟ್ಟೆ, ದಿನಪತ್ರಿಕೆ, ರಟ್ಟುಗಳನ್ನು ಬಳಸಿಕೊಂಡು ಚೆಂದನೆಯ ಬ್ಯಾಗುಗಳು, ಬಾಕ್ಸ್‌ಗಳು ಮೊದಲಾದ ದಿನೋಪಯೋಗಿ ಸಾಮಗ್ರಿ ತಯಾರಿಸುವುದನ್ನು ಅವರು ಊರಿನ ಹೆಣ್ಣು ಮಕ್ಕಳಿಗೆ ಕಲಿಸಿಕೊಟ್ಟರು. ಹೀಗೆ ತಯಾರಾದ ಸಾಮಗ್ರಿಗಳನ್ನು ವಸ್ತುಪ್ರದರ್ಶನದಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಿದರು. ಇದರಿಂದ ಬಂದ ಹಣವೆಲ್ಲ ವಿದ್ಯಾರ್ಥಿನಿಯರ ಹೆಸರಿನ 'ಗೋಲಕ' ಸೇರಿತು. ಅದೇ ಹಣದಿಂದ ಮಕ್ಕಳು ಶಾಲೆಯ ಶುಲ್ಕ ಕಟ್ಟುವುದು ಸಾಧ್ಯವಾಯಿತು. ಅಜ್ಜಿ ಮನೆಯ ತುಂಬಾ ಇಂತಹ ಯಶಸ್ವಿನ ಕಥೆಗಳು ಲೆಕ್ಕವಿಲ್ಲದಷ್ಟು ತುಂಬಿಕೊಂಡಿವೆ.

ಗ್ರಾಮೀಣ ಮಹಿಳೆಯರ ಅನೇಕ ಸಮಸ್ಯೆಗಳಿಗೆ ಸಬಿಹಾ ಸ್ಪಂದಿಸಿದ್ದರು. ಮನೆಗಳಿಗೆ ಭೇಟಿನೀಡಿ ಮಕ್ಕಳಿಗೆ ಬಾಲ್ಯವಿವಾಹ ಮಾಡದಂತೆ ತಿಳಿವಳಿಕೆ ನೀಡಿದ್ದರು. ವಿದ್ಯಾರ್ಥಿಗಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದುದನ್ನು ಕಂಡು ದಾನಿಗಳ ನೆರವಿನಿಂದ ತಮ್ಮ ಮನೆಯಲ್ಲೇ ಮಕ್ಕಳಿಗೆ ನಿತ್ಯ ಹಾಲು ನೀಡುತ್ತಿದ್ದರು. ಸಾಕಷ್ಟು ವಿದ್ಯಾರ್ಥಿಗಳಿಗೆ ಪುಸ್ತಕ, ಲೇಖನ ಸಾಮಗ್ರಿ ಕೊಡಿಸಿದ್ದರು.

ಕೋವಿಡ್ ಕಾರಣಕ್ಕೆ ಶಾಲೆಗಳು ಬಂದ್ ಆದಾಗ, ಇಲ್ಲಿನ ಮಕ್ಕಳು ಮೊಬೈಲ್ ಹಿಡಿದು ಸೀದಾ ಅಜ್ಜಿ ಮನೆಗೆ ಬಂದಿದ್ದರು. ಆನ್‌ಲೈನ್ ಕಲಿಕೆಗೆ ಬೇಕಾದ ಅಂತರ್ಜಾಲ ಸಂಪರ್ಕದ ಜೊತೆಗೆ ಅವರಿಗೆ ಅಗತ್ಯ ಮಾರ್ಗದರ್ಶನವೂ ಇಲ್ಲಿ ಸಿಕ್ಕಿತ್ತು. ಆರೋಗ್ಯದ ಸಮಸ್ಯೆ ನಡುವೆಯೂ ಮಕ್ಕಳಿಗಾಗಿ ಇನ್ನಷ್ಟು ಕೆಲಸ ಮಾಡಬೇಕು ಎನ್ನುವ ಕನಸು ಹೊತ್ತಿದ್ದರು. ಕಲಿಕಾ ಕೇಂದ್ರವನ್ನು ಇನ್ನಷ್ಟು ದೊಡ್ಡದಾಗಿ ಕಟ್ಟುವ ಮೂಲಕ ಸುತ್ತಲಿನ ಹಳ್ಳಿಗಳ ಮಕ್ಕಳಿಗೂ ನೆರವಾಗುವ ಕನಸು ಕಂಡಿದ್ದರು. ಕಳೆದ ವಾರ ಆ ಅಜ್ಜಿ ಕೊನೆಯುಸಿರು ಎಳೆದಾಗ ಊರಿನ ಕನಸೇ ಕರಗಿಹೋದಂತೆ ಪರಿತಪಿಸಿತು ಜ್ಯೋತಿಪಾಳ್ಯ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65